**ದಿನಾಂಕ: 16-02-2024 ರಂದು ಸಾಕ್ಷಿದಾರನ್ನು ಮದ್ಯಂತರ ಅರ್ಜಿಯ ಮೇರೆಗೆ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀಮತಿ ಬಿ.ಎಂ.ಆರ ವಕೀಲರಿಂದ :**

ನಾನು ಸಿಸಿ ನಂ 1271/2019 ರ ದೋಷಾರೋಪಣೆ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 63 ಎಂದು ಗುರುತಿಸಲಾಯಿತು.

**ಪಾಟಿ ಸವಾಲು ಶ್ರೀ ವೈ.ಎಸ್ ವಕೀಲರಿಂದ**

ನಾನು 10 ನೇ ತರಗತಿ ಉತ್ತೀಣರ್ವಾಗಿರುವುದಿಲ್ಲ. ನಾನು ಪ್ರೌಢ ಶಾಲೆ ಗುಲಬರ್ಗಾದಲ್ಲಿ ಮುಗಿಸಿರುತ್ತೇನೆ. ನಾನು ಮಹಾದೇವಿ ಹೆಣ್ಣುಮಕ್ಕಳ ಹೈಸ್ಕೂಲನಲ್ಲಿ ಮುಗಿಸಿರುತ್ತೇನೆ. ನಾನು ಓದುವಾಗ ನನ್ನ ದೊಡ್ಡಮನ ಮನೆಯಲ್ಲಿ ಇದ್ದೆ. ನಾನು ಓದುವ ಕಾಲದಲ್ಲಿ ಬಿ.ಸಿ.ಎಂ ವಸತಿ ನಿಲಯದಲ್ಲಿ ಇದ್ದೆ ಎಂದರೆ ನಾನು 6 ನೇ ತರಗತಿಗೆ ಮಾತ್ರ ವಸತಿ ನಿಲಯದಲ್ಲಿ ಇದ್ದೆನು. ನನ್ನ ಮದುವೆ 23.05.2010 ರಂದು ಆಗಿರುತ್ತದೆ. ನಾವು ಮಾಡಿಸಿದಂತಹ ಮದುವೆ ಕಾರ್ಡನ್ನು ನಾನು ಹಾಜರುಪಡಿಸಿರುತ್ತೇನೆ. ನಾನು ಈಗ ನಿಪಿ 59 ನೋಡುತ್ತಿದ್ದು ಅದು ಶಾಂತಕುಮಾರ ರವರ ಮದುವೆಯ ಕಾರ್ಡ ಇರುತ್ತದೆ ಎಂದರೆ ಸರಿ. ಕಾರ್ಡಿನಲ್ಲಿ ಎದರುದಾರರ ಸಂಬಂಧಿಕರ ಹೆಸರು ಇದೆ ಎಂದರೆ ಸರಿ ನನ್ನ ಸಂಬಂಧಿಕರ ಹೆಸರು ಇರುವುದಿಲ್ಲ ಎಂದರೆ ಸರಿ. ಮದುವೆ ಎದುರುದಾರರ ಮಾಡಿಕೊಟ್ಟಿದ್ದರಿಂದ ಅವರ ಹೆಸರು ಮೊದಲು ಇರುತ್ತದೆ ಎಂದರೆ ಸರಿಯಲ್ಲ. ಗಂಡಿನ ಕಡೆಯವರು ಮಾಡಿಸಿದಂತಹ ಕಾರ್ಡನ್ನು ನನಗೆ ಕೊಟ್ಟಿರುತ್ತಾರೆ ಅದನ್ನು ನಾನು ಹಾಜರುಪಡಿಸಿರುತ್ತೇನೆ, ಕಾರ್ಡಿನಲ್ಲಿ ಮೊದಲು ಎದುರುದಾರರ ಹೆಸರು ಇರುತ್ತದೆ ಎಂದರೆ ಸರಿ.

ನನ್ನ ತಂದೆಗೆ ಎಷ್ಟು ಜನ ಹೆಂಡತಿಯರೆಂದು ನನಗೆ ಗೊತ್ತಿಲ್ಲ. ನಾನು ನನ್ನ ತಂದೆಗೆ ಮೊದಲನೆಯ ಹೆಂಡತಿಯ ಮಗಳು, ನನ್ನ ತಂದೆ ಈಗ ಮೃತಪಟ್ಟಿರುತ್ತಾರೆ, ನನ್ನ ತಂದೆ 28.01.2007 ರಂದು ಮೃತಪಟ್ಟಿರುತ್ತಾರೆ. ನನ್ನ ತಾಯಿಯ ಸ್ವಂತ ಇಬ್ಬರು ಅಕ್ಕಂದಿರು ನನ್ನ ತಂದೆಗೆ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಒಟ್ಟು ನಾಲ್ಕು ಜನರನ್ನು ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ 4 ನೇ ಹೆಂಡತಿ ಗೊಬ್ಬೂರ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ನನ್ನ ತಾಯಿ ಒಬ್ಬಳೇ ಹೆಂಡತಿ ಇರುತ್ತಾಳೆ. ನನ್ನ ತಂದೆಗೆ ನಾವು ಇಬ್ಬರು ಮಕ್ಕಳು ನಾನು ಮತ್ತು ನನ್ನ ತಮ್ಮ.

ಮದುವೆ ಸಮಯದಲ್ಲಿ 8 ತೊಲೆ ಬಂಗಾರ, ರೂ. 2 ಲಕ್ಷ ಹಣವನ್ನು ಎದುರುದಾರರಿಗೆ ಕೊಟ್ಟಿರುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ನಿಪಿ 60 ನ್ನು ನೋಡುತ್ತಿದ್ದು ಅದರಲ್ಲಿ ಲೈಸನ್ಸ ನಂ, ವ್ಯಾಟ ನಂಬರ ಇರುವುದಿಲ್ಲ ಎಂದರೆ

ಅಂಗಡಿಯವರು ನಮಗೆ ಹೇಗೆ ರಶೀದಿ ಕೊಟ್ಟಿರುತ್ತಾರೋ ಹಾಗೇ ಹಾಜರುಮಾಡಿರುತ್ತೇನೆ. ರಶೀದಿ ಮೇಲೆ ಇದ್ದಂತಹ ತಾರೀಖು ಹಾಗೂ ಅದರಲ್ಲಿ ಬರೆದಂತಹ ಅಕ್ಷರಗಳು ಬೇರೆ ಇರುತ್ತವೆ ಎಂದರೆ ಸರಿಯಲ್ಲ. ರಶೀದಿಯಲ್ಲಿ ಬಂಗಾರವನ್ನು ನನ್ನ ಗಂಡನಿಗೆ ಕೊಟ್ಟ ಹಾಗೇ ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿ ಖರೀದಿ ಮಾಡಿದ್ದರಿಂದ ಅವರ ಹೆಸರು ಇರುತ್ತದೆ. ನಾನು ನಿಪಿ 62 ನ್ನು ನೋಡುತ್ತಿದ್ದು ಅದರ ಮೇಲೆ ಲೈಸನ್ಸ ನಂಬರ ಇರುವುದಿಲ್ಲ, ಅಂಗಡಿಯ ಸೀಲು ಇರುವುದಿಲ್ಲ ಹಾಗೂ ಯಾವ ವಸ್ತುವನ್ನು ಖರೀದಿ ಮಾಡಿರುತ್ತೇವೆಂದು ಐಟಂ ಇರುವುದಿಲ್ಲ ಎಂದರೆ ಸಾಕ್ಷಿಯು ನಾವು ಖರೀದಿ ಮಾಡಿದ ನಂತರ ಬಿಲ್ಲನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಬೆಳಿಗ್ಗೆ ಬಂಗಾರ ಖರೀದಿ ಮಾಡಿರುತ್ತೇವೆ ಸಂಜೆ ಸಾಮಾನು ಖರೀದಿ ಮಾಡಿರುತ್ತೇವೆ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಎರಡು ತೊಲೆ ಚೈನು, ಗಟ್ಟಿ ಉಂಗುರ, ಬ್ರೆಸ್ಲೆಟ್ (ಡಿಸೈನ ನೆನಪು ಇರುವುದಿಲ್ಲ) ಒಟ್ಟು 8 ತೊಲೆ ಬಂಗಾರವನ್ನು ಹಾಕಿರುತ್ತೇವೆ. ಮದುವೆ ಆಗುವಕ್ಕಿಂತ ಮುಂಚೆ ನಾನು ಹಾಗು ಎದುರುದಾರ ಪ್ರೀತಿಸುತ್ತಿದ್ದೆವು ಎಂದರೆ ಸರಿಯಲ್ಲ. ನಾವು ಮನೆಯಲ್ಲಿ ತಿಳಿಸಿ ಮನೆಯವರನ್ನು ಒಪ್ಪಿಸಿ ಮದುವೆ ಆಗಿರುತ್ತೇವೆ ಎಂದರೆ ಸರಿಯಲ್ಲ. ಮದುವೆಯ ನಂತರ ಗುಲಬರ್ಗಾದ ಪೋಲಿಸ ಕ್ವಾಟರ್ಸ ನಲ್ಲಿ ಇದ್ದೆವು. 3 ವರ್ಷಗಳ ವರೆಗೂ ನಾನು ಅಲ್ಲೆ ಇದ್ದೆ. ನಾನು 7-8 ತಿಂಗಳ ನಂತರ ಗರ್ಬಿಣಿಯಾಗಿದ್ದರಿಂದ ಶಹಾಪೂರಕ್ಕೆ ಬಂದಿರುತ್ತೇನೆ. ಬಾಣಂತಿ ನಂತರ ನಾನು ಹೋಗುವುದು ಬರುವುದು ಮಾಡುತ್ತಿದ್ದೆ. ಎದುರುದಾರರು ನನ್ನನ್ನು ಕರೆದುಕೊಂಡು ಹೋಗುವುದು ಬರುವುದು ಮಾಡುತ್ತಿದ್ದರು. ನಾನು ಬಾಣಂತಿಗೆ ಎಂದು ಬಂದಾಗ ಸಮಸ್ಯೆಗಳು ಪ್ರಾರಂಭವಾದವು. ಬಾಣಂತಿ ನಂತರ ನಾನು ಗಂಡನ ಮನೆಗೆ ಹೋದಾಗ ಅಲ್ಲಿ ಜಗಳ ಆಡಿರುತ್ತಾರೆ ನಾನು ಮತ್ತೆ ಮರಳಿ ಮನೆಗೆ ಬಂದಿರುತ್ತೇನೆ. ನಾನು ಯಾವ ತಾರೀಖಿನಂದು ನನ್ನ ಗಂಡನ ಮನೆಗೆ ಹೋಗಿರುತ್ತೇನೆ ಎಂದರೆ ನೆನಪು ಇರುವುದಿಲ್ಲ. ನಾನು ಶಹಾಪೂರದಲ್ಲಿ ಕಂಪ್ಯೂಟರ ಇನ್ಸಿಟ್ಯೂಟನ್ನು ನಡೆಸುತ್ತಿದ್ದೆ. ನಾನು 2010 ರಿಂದ 2013-14 ರ ವರೆಗೆ ನಡೆಸಿರುತ್ತೇನೆ. ಕಂಪ್ಯೂಟರ ಇನ್ಸಿಟಿಟೂಶನಗೆ ಎದುರುದಾರರು ಮಾಲಿಕರಿದ್ದರು ಆದರೆ ನನ್ನ ತಾಯಿ ಹಾಕಿಸಿರುತ್ತಾಳೆ. ನನ್ನ ತಾಯಿ ಹಣ ಕೊಟ್ಟು ಹಾಕಿಸಿರುವ ವಿಚಾರ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಅದು ಶಾಂತ ಕುಮಾರ ಮಾಲೀಕತ್ವದಲ್ಲಿ ಇದ್ದಿದ್ದರಿಂದ ಆತನೇ ಹಾಕಿಸಿರುತ್ತಾನೆ ಎಂದರೆ ಸರಿಯಲ್ಲ. ನಾನು ಈಗ ಮೆಮೊ ಆಫ ಅಗ್ರಿಮೆಂಟನ್ನು ನೋಡುತ್ತಿದ್ದು ಅದು ಎದುರುದಾರರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ

ಆದರೆ ನನ್ನ ತಾಯಿ ಹಾಕಿಸಿರುತ್ತಾರೆ. ಕಂಪೂಟರ ಇನ್ಸಿಟಿಟೂಶನ ನಡೆಸುವುದರಿಂದ ನಾನು ಹಾಗೂ ಎದುರುದಾರರ ಶಹಾಪೂರದಲ್ಲೇ ಇದ್ದೆವು ಎಂದರೆ ಸಾಕ್ಷಿಯು ಕಲಬುರ್ಗಿಯಿಂದ ಹೋಗುವುದು ಬರುವುದು ಮಾಡುತ್ತಿದ್ದೇವು ಎಂದು ನುಡಿದಿರುತ್ತಾರೆ. ನಾನು 5 ತಿಂಗಳ ವರೆಗೂ ಕಲಬುರ್ಗಿಯಿಂದ ಓಡಾಡಿರುತ್ತೇನೆ, ಗರ್ಭಿಣಿಯಾದಾಗ ಶಹಾಪೂರದಲ್ಲೇ ನನ್ನ ತಾಯಿಯ ಮನೆಯಲ್ಲಿ ಇದ್ದುಕೊಂಡು ಇನ್ಸಿಟಿಟೂಶನನ್ನು ನೋಡಿಕೊಂಡು ಹೋಗಿರುತ್ತೇನೆ. ಇನ್ಸಿಟಿಟೂಶನಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಎದುರುದಾರ 3-4 ವರ್ಷಗಳ ವರೆಗೂ ಸತತವಾಗಿ ಕಿರುಕುಳ ಕೊಡುತ್ತಿದ್ದ ಎಂದು ಬರೆಯಿಸಿರುತ್ತೇನೆ ಎಂದರೆ ಸರಿ.

ಎದುರುದಾರ 2012 ರಿಂದ 3-4 ವರ್ಷಗಳ ವರೆಗೂ ನನಗೆ ಕಿರುಕುಳ ಕೊಟ್ಟಿರುತ್ತಾನೆ ಎಂದರೆ ಸರಿ. ಎದುರುದಾರರು ನನ್ನನ್ನು ಬಿಟ್ಟ ನಂತರವೂ ಸಹ ನನಗೆ ಪೋನ ಮುಖಾಂತರ ಮತ್ತು ಜನರನ್ನು ಕಳುಹಿಸಿ ಕಿರುಕುಳವನ್ನು ನೀಡಿರುತ್ತಾನೆ. ನಾನು ಶಹಾಪೂರ ಪೋಲಿಸ ಠಾಣೆಗೆ ಹೋದಾಗ ಪೋಲಿಸರ ಅದನ್ನು ಪಡೆದಿರುವುದಿಲ್ಲ. ನಾನು ಎಸ್.ಪಿ ಕಲಬುರ್ಗಿ ಕಚೇರಿಗೆ ಹೋದಾಗ ಕೇಸನ್ನು ಪಡೆದುಕೊಳ್ಳುವುದಾಗಿ ಹೇಳಿರುತ್ತಾರೆ ಆದರೆ ಪಡೆದುಕೊಂಡಿರುವುದಿಲ್ಲ. 2014 ರಲ್ಲಿ ಎದುರುದಾರರು ವಿಚ್ಚೇದನಕ್ಕಾಗಿ ಕಲಬುರ್ಗಿ ಕೋರ್ಟನಲ್ಲಿ ಅರ್ಜಿಯನ್ನು ಹಾಕಿದ್ದರು ಎಂದರೆ ಸರಿ.ನಾನು ಹಾಜರಾಗಿ ವಕೀಲರನ್ನು ನೇಮಿಸಿದ್ದೆ ಎಂದರೆ ಸರಿ. ನಾನು ವಿಚ್ಚೇದನ ಪ್ರಕರಣದಲ್ಲಿ ಜೀವನಾಂಶವನ್ನು ಕೇಳಿರುವುದಿಲ್ಲ. ನನಗೆ ವಿಚ್ಚೇದನ ಬೇಕಿದ್ದರಿಂದ ನಾನು ನ್ಯಾಯಾಲಯದ ಮುಂದಿನ ತಾರೀಖಿನಂದು ಹಾಜರಾಗಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಹುಶಾರು ಇಲ್ಲದೆ ಇದ್ದುದ್ದರಿಂದ ನಾನು ಹೋಗಿರುವುದಿಲ್ಲ. ನಾನು ಇನ್ನೊಂದು ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಲಾಲಪ್ಪ ಎಂಬುವ ವ್ಯಕ್ತಿ ನನಗೆ ಪರಿಚಯ ಇರುವುದಿಲ್ಲ ಮುಂದುವರೆದು ಸಾಕ್ಷಿಯು ನನಗೆ ಗೊತ್ತು ಎಂದು ನುಡಿದಿರುತ್ತಾರೆ. ನಾನು ಶಿವಶಂಕರ ಎನ್ನುವವರ ಮೇಲೆ ಕ್ರಿಮಿನಲ್ ಪ್ರಕರಣ ಹಾಕಿದ್ದೆ ಎಂದರೆ ಸರಿ. ಲಾಲಪ್ಪ ಎನ್ನುವವರು ಕ್ರಿಮಿನಲ್ಲ ಪ್ರಕರಣದಲ್ಲಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ. ನನ್ನ ವಿರುದ್ಧ ಆತ್ಮ ಹತ್ಯ ಪ್ರಯತ್ನ ಇತ್ತು ಎಂದರೆ ಸರಿ. ಅದರ ಕ್ರೈ ನಂ.322/2015 ಇರುತ್ತದೆ ಎಂದರೆ ಸರಿ. ಶಿವಶಂಕರ ಇವರ ಕಡೆಯಿಂದ ರೂ. 11 ಲಕ್ಷ ಹಣವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಶಿವಶಂಕರ ಈತನ ಹಣ ವಾಪಸ್ಸು ಕೇಳಲು ಬಂದಿದ್ದರು ಎಂದರೆ ಸರಿ. ಅವರಿಗೆ ಹಣ ಕೊಡಬಾರದು ಎನ್ನುವ ಉದ್ದೇಶದಿಂದ ಅವರ ಮೇಲೆ ಕ್ರಿಮಿನಲ ಕೇಸ ಹಾಕಿರುತ್ತೇನೆ ಎಂದರೆ ಸರಿ. ಮುಂದುವರೆದು ಸಾಕ್ಷಿಯು ಹಣ ನನ್ನ ಗಂಡ ಪಡೆದಿದ್ದ ನನಗೆ ಬಂದು ಕೇಳಿದ್ದರಿಂದ ನಾನು ಕೇಸ ಹಾಕಿರುತ್ತೇನೆ. ನಾನು ಸಿಸಿ ನಂ 1441/2014 ರಲ್ಲಿ ಸಾಕ್ಷಿ ಕೊಟ್ಟಿರುತ್ತೇನೆ. ಅಗ್ರಿಗೋಲ್ಡ

ರಶೀದಿಗಳಲ್ಲಿ ನನ್ನ ಹೆಸರು ಇರುವುದಿಲ್ಲ ಎಂದರೆ ಹೆಸರು ನನ್ನದು ಇರಲಿಲ್ಲ ಆದರೆ ಹಣವನ್ನು ನಾನು ಕಟ್ಟಿರುತ್ತೇನೆ. ನಾನು ಹಣ ಕಟ್ಟಿರುತ್ತೇನೆ ಎಂದು ಅಗ್ರಿಗೋಲ್ಡ ರಶೀದಿಗಳಲ್ಲಿ ಬರೆದಿಲ್ಲ ಎಂದರೆ ಸರಿ. ನಿಪಿ 3, 4, 5, 6, 7, 8, 9, 10, 11, 12 ರಿಂದ 14, 15, 16, 17 , 18 ರಿಂದ 29 ರ ಮೇಲೆ ಶಾಲೆಯ ಸೀಲು ಇರುವುದಿಲ್ಲ ಎಂದರೆ ಫೀಸ ಕಟ್ಟಿದ ನಂತರ ರಶೀದಿಯನ್ನು ಕೊಟ್ಟಿರುತ್ತಾರೆ. ನಾನು ನಿಪಿ 13ನ್ನು ನೋಡುತ್ತಿದ್ದು ಅದರಲ್ಲಿ ಶಾಲೆಯ ಹೆಸರು ಮತ್ತು ಶಾಲೆಯ ಹೆಸರು ಇರುವುದಿಲ್ಲ ಎಂದರೆ ಸರಿ. ನಾನು ನಿಪಿ 1 ರಿಂದ 29 ರ ವರೆಗೂ ಸೃಷ್ಟಿಸಿ ಹಾಜರುಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮಗ ಓದಿದ ಶಾಲೆಗೆ ದೇಣಿಗೆ ಕೊಟ್ಟಿರುವುದಿಲ್ಲ ಫೀಸ ಕಟ್ಟಿರುತ್ತೇನೆ ಆದರೆ ರಶೀದಿಗಳಲ್ಲಿ ಪಾವತಿಸಿದ ದೇಣಿಗಸಿ ಯಾವುದೆ ಕಾರಣಕ್ಕೂ ಹಿಂದಿರುಗಿಸುವುದಿಲ್ಲ ಎಂದು ಬರೆದಿರುತ್ತದೆ. ನಾನು ಹಾಜರುಪಡಿಸಿದ ನಿಪಿ 1 ರಿಂದ 6 ಪಾವತಿಸಿದ ಫೀಸ್ ರಶೀದಿಗಳು ಇರುತ್ತವೆ ಎಂದರೆ ಸರಿಯಲ್ಲ.

ನನ್ನ ಮಾವನ ಹೆಸರಿನಲ್ಲಿ 2 ಎಕರೆ ಜಮೀನು ಇರುತ್ತದೆ. ಜಮೀನಿಂದ ವಾರ್ಷಿಕ ಆದಾಯ ರೂ. 1 ಲಕ್ಷ ಬರುತ್ತದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 2 ಎಕರೆ ಜಮೀನಿನಲ್ಲಿ 4 ಪಾಲುಗಳು ಆಗಬೇಕೆಂದರೆ ಸರಿಯಲ್ಲ. ನನ್ನ ಗಂಡನಿಗೆ 15 ಗುಂಟೆ ಪಾಲದಲ್ಲಿ ಬರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು 2 ಎಕರೆ ಬರುತ್ತದೆ ಎಂದು ನುಡಿದಿರುತ್ತಾರೆ. ಎದುರುದಾರರಿಗೆ ರೂ.25,000 ವೇತನ ಇರುತ್ತದೆ ಎಂದು ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿ. ನನ್ನ ಗಂಡ ಮಾಡುವ ಕಂಪನಿಯ ಹೆಸರು ಸ್ಯಾಮಸಂಗ ಗ್ಲೊಬಲ್ ಟೆಕ್ ರಲ್ಲಿ ಕೆಲಸ ಮಾಡುತ್ತಾರೆ. ಅಂಗಡಿ ಸೂಪರ ಮಾರ್ಕಟನಲ್ಲಿ ಇರುತ್ತದೆ. ನನಗೆ ಮಾಲೀಕನ ಹೆಸರು ನೆನಪು ಇಲ್ಲ. ಸ್ಯಾಮಸಂಗ ಗ್ಲೊಬಲ ಟೆಕ್ ಅಂಗಡಿಗಳು ಮಾರ್ಕೆಟ್ಟಿನಲ್ಲಿ ಬಹಳ ಇರುತ್ತವೆ ಎಂದರೆ ಇರಬಹುದು ಎಂದು ನುಡಿದಿರುತ್ತಾರೆ. ನನ್ನ ಕಡೆ ಕಾರ ಇದೆ ಎಂದರೆ ಇಲ್ಲ. ನಾನು ಈಗ ಆರ್.ಟಿ.ಓ ನೀಡಿದ ವೆಹಿಕಲ್ ಪರ್ಟಿಕುಲರ್ಸ ನೋಡುತ್ತಿದ್ದು ಅದರಲ್ಲಿ ಜ್ಯೋತಿ ನನ್ನ ಹೆಸರು ಇರುವುದಿಲ್ಲ ಶಿವಕುಮಾರ ಕುರಿಹಾಳ ನನ್ನ ತಂದೆಯ ಹೆಸರು ಇರುತ್ತದೆ ಆದರೆ ನನಗೆ ಸಂಬಂದಪಟ್ಟಿದ್ದು ಇರುವುದಿಲ್ಲ. ನನ್ನ ತಾಯಿ ಅಂಗನವಾಡಿ ಟೀಚರ ಎಂದರೆ ಸರಿ. ನನ್ನ ತಾಯಿ ಕುರಿಹಾಳದಲ್ಲಿ ಮುಂಚೆ ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಳು ಎಂದರೆ ಸರಿ. ಕುರಿಹಾಳ ವಿಳಾಸದ ಮೇಲೆ ಕಾರು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಶಹಾಪೂರದ ಸುಬೇದಾರ ಆಸ್ಪತ್ರೆಯ ಹಿಂದಿನ ಬಾಜುದಲ್ಲಿ 30 ಇಂಟು 40 ಮನೆ ಇದೆ ಎಂದರೆ ಸರಿಯಲ್ಲ. ಅದರ ಮೇಲೆ ಇನೊಂದು ಅಂತಸ್ತು ಕಟ್ಟುತ್ತಿದ್ದೇವೆ ಎಂದರೆ ಅದು ನಮ್ಮ ಮನೆ ಇರುವುದಿಲ್ಲ. ನಾನು ಈಗ ಒಂದು ಫೋಟೋ ನೋಡುತ್ತಿದ್ದು ಅದು ನನ್ನ ಮನೆ ಇರುವುದಿಲ್ಲ. ಎದುರುದಾರರಿಗೆ ಶಸ್ತ್ರ ಚಿಕಿತ್ಸೆ ಆಗಿದ್ದರಿಂದ ಜೀವನಾಂಶ ಕೊಡುವ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

ಅವರ ದೇಹದ ಇನ್ನೊಂದು ಭಾಗಕ್ಕೆ ಶಸ್ತ್ರ ಚಿಕಿತೆಸ ಆಗಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರಿಗೆ ಬರುವಂತಹ ಪಾಲುನ್ನು ಮಾರಾಟ ಮಾಡಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ರೂ. 2 ಲಕ್ಷ ಹಣ ಎದುರುದಾರರು ಕೇಳಿರುತ್ತಾರೆ ನಾವು ಕೊಟ್ಟಿರುತ್ತೇವೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಆಗ ನೆನಪವು ಇರುವುದಿಲ ಈಗ ಹೇಳುತ್ತಿದ್ದೇನೆ. ಮದುವೆಯಲ್ಲಿ ಶಾಂತಕುಮಾರ ಈತನೆ ಖರ್ಚು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಐಶಾರಾಮಿ ಜೀವನ ಬೇಕಿದ್ದರಿಂದ ನಾನು ಶಹಾಪೂರದಲ್ಲೇ ಉಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೂರು ಮಹಿಳಾ ಸಂಘಗಳನ್ನು ನಡೆಸುತ್ತೆನೆ ಎಂದರೆ ಸರಿಯಲ್ಲ. 9901034405 ಮೊಬೈಲ ನಂ ನನ್ನ ತಾಯಿಯದು ಇರುತ್ತದೆ. ಮೂರು ಸಂಘಗಳಿಗೆ ಇದೇ ನಂಬರ ಇರುತ್ತದೆ ಎಂದರೆ ನನ್ನ ತಾಯಿ ಅಂಗನವಾಡಿ ಶಿಕ್ಷಕಿ ಇದ್ದುದ್ದರಿಂದ ಈ ನಂಬರ ಕೊಟ್ಟಿರುತ್ತಾರೆ. ನಾನು ಸಂಘದ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಯೂ ಸಹ ಮಾಡುವುದಿಲ್ಲ. ಜಗದೇವಿ ಸ್ತ್ರಿ ಶಕ್ತಿ ಸಂಘಕ್ಕೆ ಜೋತಿ ಗಂಡ ಶಿವಕುಮಾರ ಮತ್ತು ಕಸ್ತೂರಿ ಗಂಡ ಭೀಮರಾಯ ಇವರು ಸದಸ್ಯ ಇದ್ದಾರೆ ಎಂದರೆ ಇಲ್ಲ. ಭಾಗ್ಯವಂತಿ ಮಹಿಳಾ ಸಂಘಕ್ಕೆ ಲಕ್ಷ್ಮೀ ಗಂಡ ಮರೆಪ್ಪ ಇನ್ನೊಬ್ಬರು ಕಸ್ತೂರೆವ್ವ ಗಂಡ ಭೀಮಣ್ಣ ಇವರು ಸದಸ್ಯ ಇದ್ದಾರೆ ಎಂದರೆ ಗೊತ್ತಿಲ್ಲ. ರೇಣುಕಾ ಎಲ್ಲಮ್ಮ ಮಹಿಳಾ ಸಂಘಕ್ಕೆ ಎಲ್ಲಮ್ಮ ಮತ್ತು ನಾಗಮ್ಮ ಸದಸ್ಯರು ಇರುತ್ತೆ ಎಂದರೆ ಗೊತ್ತಿಲ್ಲ. ಈ ಮೂರು ಸಂಘಗಳ ಅಧ್ಯಕ್ಷರು ನಾನು ಇದ್ದು ಹಣದ ವ್ಯವಹಾರ ನೋಡಿಕೊಳ್ಳುತ್ತೇನೆ ಎಂದರೆ ಸರಿಯಲ್ಲ. ನಾನು ಆ ಸಂಘದಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ಸಂಘದಿಂದ ಸುಮಾರು 30-40 ಸಾವಿರ ಸಂಬಳ ಬರುತ್ತದೆ ಎಂದರೆ ಗೊತ್ತಿಲ್ಲ. ನನಗೆ ಮನೆ, ಕಾರು ಹಾಗೂ ಸಂಬಳ ಇದ್ದಿದ್ದರಿಂದ ಜೀವನ ನಡೆಸುಕೊಂಡು ಹೋಗುವ ಕಷ್ಟ ಇರವುದಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಮಗನ ಪಿಸನ್ನು ಸಾಲ ಮಾಡಿ ಕಟ್ಟಿರುತ್ತೇನೆ. ನಾನು ಸಾಲಾ ಮಾಡಿ ಫೀಸನ್ನು ಕಟ್ಟಿರುತ್ತೇನೆ ಎಂದರೆ ಕಾಗದ ಪತ್ರವನ್ನು ಹಾಜರುಮಾಡಿರುವುದಿಲ್ಲ. ಎದುರುದಾರರ ತಮ್ಮ ಮತ್ತು ತಾಯಿ ಬಟ್ಟೆ ವ್ಯಾಪಾರ ಮಾಡುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಕಾಗದಪತ್ರಗಳನ್ನು ಹಾಜರು ಮಾಡಿಲ್ಲ. ಎದುರುದಾರರ ತಮ್ಮ ಹಾಗೂ ತಂಗಿ ಬೇರೆ ಆಗಿ ಸಂಸಾರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರ ತಂಗಿಗೆ ಮದುವೆ ಮಾಡಿಕೊಟ್ಟು ಗಂಡನ ಮನೆಯಲ್ಲಿರುತ್ತಾಳೆ ಎಂದರೆ ಸಾಕ್ಷಿಯು ಎದುರುದಾರರ ಮನೆಯಲ್ಲಿ ಇರುತ್ತರೆ ಎಂದು ನುಡಿದಿರತ್ತಾರೆ. ಈಗ ಅವರು ಎಲ್ಲಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎದುರುದಾರಾರ ತಮ್ಮ ಮತ್ತು ತಾಯಿ ಅಣವಾರದಲ್ಲಿ ಬಟ್ಟೆ ಮತ್ತು ಕಿರಾಣಿ ಅಂಗಡಿ

ಹಾಕಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ಅರ್ಜಿಯಲ್ಲಿ ಹೇಳಿರುವ ಎಲ್ಲ ವಿಚಾರಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆ.ಎಂ.ಎಫ್.ಸಿ.**
**ಶಹಾಪೂರ**